ದಿನಾಂಕಃ 05.06.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಎಂ.ಆರ್. ವಕೀಲರಿಂದಃ**

ನಾನು ಮೂಡಿಗೆರೆಯ CDCC ಬ್ಯಾಂಕ್ ಮತ್ತು ಕೆನರಾ ಬ್ಯಾಂಕ್ ನಲ್ಲಿ ಖಾತೆ ಹೊಂದಿದ್ದೇನೆ. ಹಂತೂರಿನ PACS ಸೊಸೈಟಿಯಲ್ಲಿ ನನ್ನ ಜಮೀನಿನ ಮೇಲೆ ಸಾಲ ಪಡೆದಿದ್ದೇನೆ. ಈ ಪ್ರಕರಣವನ್ನು ಹೊರತುಪಡಿಸಿ ಬೇರೆ ಯಾರ ವಿರುದ್ಧವೂ ಸಹಾ ನಾನು ಚೆಕ್ ಪ್ರಕರಣ ದಾಖಲಿಸಿಲ್ಲ. ದೇವವೃಂದ ಗ್ರಾಮದ ಸ.ನಂ.216 ರ ನನ್ನ ಜಾಗಕ್ಕೆ ಸಂಬಂಧಪಟ್ಟಂತೆ ಒಂದು ಸಿವಿಲ್ ದಾವೆಯನ್ನು ಸಲ್ಲಿಸಿದ್ದೇನೆ. ಆ ದಾವೆಯ ಪ್ರತಿವಾದಿಗಳು ನನ್ನ ಜಮೀನಿನ ಕೃಷಿ ಚಟುವಟಿಕೆಗೆ ತೊಂದರೆ ಮಾಡುತ್ತಿದ್ದ ಕಾರಣ ಆ ದಾವೆಯನ್ನು ಸಲ್ಲಿಸಿದ್ದೇನೆ. ಆರೋಪಿಯು ಅಡಿಕೆ ವ್ಯಾಪಾರ ಮಾಡುತ್ತಾರೆ. ಹಾಗೇ ಅಂದಾಜು 10 ವರ್ಷದಿಂದ ಆರೋಪಿಯು ಅಡಿಕೆ ವ್ಯಾಪಾರ ಮಾಡುತ್ತಿದ್ದಾರೆ. ನನ್ನ ತೋಟದಲ್ಲಿ ಅಡಿಕೆ ಬೆಳೆ ಬೆಳೆಯುತ್ತೇನೆ. ನಾನು ಆರೋಪಿಯೊಂದಿಗೆ ಅಡಿಕೆ ವ್ಯವಹಾರ ಮಾಡಿಲ್ಲ. ದೇವವೃಂದದ ಚೆಂದ್ರೇಗೌಡರವರಿಂದ ಆರೋಪಿಯು ಅಡಿಕೆ ಖರೀದಿ ಮಾಡಿದ್ದಾರ ಎಂದು ನನಗೆ ಗೊತ್ತಿಲ್ಲ.

ಆರೋಪಿಯು ನನಗಿಂತಲೂ ಆರ್ಥಿಕ ಸಧೃಡರು ಎಂದರೆ ನನಗೆ ಗೊತ್ತಿಲ್ಲ. ಆರೋಪಿಯ ಹೆಸರಿನಲ್ಲಿ ಎಷ್ಟು ಜಮೀನು ಇದೆ ಎಂದು ನನಗೆ ಗೊತ್ತಿಲ್ಲ. ಆರೋಪಿಗೆ ಹಣ ಕೊಡುವ ಮುನ್ನ ಅವರಿಗೆ ಹಣ ಹಿಂತಿರುಗಿಸುವ ಸಾಮರ್ಥ್ಯ ಇದೆಯಾ ಎಂದು ಗೊತ್ತಿತ್ತ ಎನ್ನುವ ಪ್ರಶ್ನೆಗೆ ಸಾಕ್ಷಿಯು ಅವರು ಅಡಿಕೆ ವ್ಯಾಪಾರ ಮಾಡುತ್ತಿದ್ದ ಕಾರಣ ಹಣ ಕೊಟ್ಟಿರುವುದಾಗಿ ನುಡಿಯುತ್ತಾರೆ. ಆರೋಪಿಗೆ ಎಷ್ಟು ಜನ ಸಹೋದರರು ಇದ್ದಾರೆ ಎಂದು ನನಗೆ ಮಾಹಿತಿ ಇಲ್ಲ. ಆರೋಪಿ ತನ್ನ ಮನೆಯಲ್ಲಿ ತನ್ನ ಪತ್ನಿ ಮತ್ತು ಮಕ್ಕಳೊಂದಿಗೆ ವಾಸಿಸುತ್ತಿದ್ದು, ಆರೋಪಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ಆರೋಪಿ ನನ್ನ ಸಂಬಂಧಿಯಲ್ಲ. ಈ ಪ್ರಕರಣದಲ್ಲಿ ತಿಳಿಸಿರುವ ವ್ಯವಹಾರಕ್ಕೂ ಮುನ್ನ ನನ್ನ ಹಾಗೂ ಆರೋಪಿಯ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಆಗಿಲ್ಲ. 2023 ನೇ ಇಸವಿಯಲ್ಲಿ ಆರೋಪಿಯನ್ನು ಹೊರತುಪಡಿಸಿ ನಾನು ಬೇರೆ ಯಾರಿಗೂ ಹಣ ಕೊಟ್ಟಿಲ್ಲ. ನಾನು ಬಿ.ಪಿ.ಎಲ್. ಪಡಿತರ ಚೀಟಿ ಹೊಂದಿದ್ದೇನೆ. ನಾನು ವಾರ್ಷಿಕವಾಗಿ ರೂ.4,000/- ರಿಂದ ರೂ.5,000/- ದಷ್ಟು ಬ್ಯಾಂಕ್ ಮೂಲಕ ವ್ಯವಹಾರ ಮಾಡುತ್ತೇನೆ. 2023 ನೇ ಸಾಲಿನಲ್ಲಿ ಸ್ವಲ್ಪ ಹೆಚ್ಚು ಮೊತ್ತದ ಬ್ಯಾಂಕ್ ವ್ಯವಹಾರ ಮಾಡಿದ್ದೇನೆ.

ಕಾಫೀ ಮತ್ತು ಮೆಣಸು ಮಾರಾಟದ ಬಾಬ್ತು ಖರೀದಿದಾರರು ಬ್ಯಾಂಕ್ ಮೂಲಕ ಹಣ ಪಾವತಿಸುತ್ತಾರೆ ಎಂದರೆ ಸಾಕ್ಷಿಯು ನನಗೆ ನಗದು ರೂಪದಲ್ಲಿ ಹಣ ಕೊಟ್ಟಿದ್ದರು ಎಂದು ನುಡಿಯುತ್ತಾರೆ. 2023 ರಲ್ಲಿ 4-5 ಬಾರಿ ನಾನು ಕಾಫೀ ಮತ್ತು ಮೆಣಸು ಮಾರಾಟ ಮಾಡಿದ್ದೇನೆ. 2023 ನೇ ಇಸವಿಯಲ್ಲಿ ನಾನು ಕಾಫೀ ಮಾರಾಟ ಮಾಡಿದ್ದಾಗ ಒಂದು ಚೀಲ ಕಾಫೀಗೆ ರೂ.9,000/- ರಿಂದ ರೂ.10,000/- ಇತ್ತು. ಆ ಸಮಯದಲ್ಲಿ ಒಂದು ಕ್ವಿಂಟಲ್ ಮೆಣಸಿನ ಬೆಲೆ ಎಷ್ಟಿತ್ತು ಎಂದು ನನಗೆ ನೆನಪಿಲ್ಲ. ಆರೋಪಿ ತನ್ನ ಅಡಿಕೆ ವ್ಯಪಾರಕ್ಕೆ ಹಣ ಬೇಕೆಂದು ನನ್ನಿಂದ ಹಣ ಪಡೆದಿದ್ದಾರೆ. ಈ ವಿಚಾರವನ್ನು ದೂರು ಮತ್ತು ನೋಟೀಸಿನಲ್ಲಿ ನಮೂದಿಸಿಲ್ಲ. ಆರೋಪಿಗೆ ಹಣ ಕೊಟ್ಟ ಬಗ್ಗೆ ಕರಾರು ಮಾಡಿಕೊಳ್ಳಲು ನನಗೆ ತೊಂದರೆ ಇರಲಿಲ್ಲ. ದಿ.01.05.2023 ರಂದು

ಆರೋಪಿ ನನ್ನ ಬಳಿ ಹಣ ಪಡೆದಿದ್ದು ಅದರ ಹಿಂದಿನ ದಿನ ನನ್ನ ಬಳಿ ಹಣ ಕೇಳಿದ್ದರು. ಮೂಡಿಗೆರೆ ಟೌನ್ ನಲ್ಲಿ ಆರೋಪಿ ನನ್ನ ಬಳಿ ಹಣ ಕೇಳಿದ್ದರು. ಕಾಫೀ ಮಾರಾಟದಿಂದ ಬಂದಿದ್ದ ಹಣ ನನ್ನ ಮನೆಯಲ್ಲಿ ಇದ್ದದ್ದನ್ನು ಆರೋಪಿಗೆ ಕೊಟ್ಟಿದ್ದೇನೆ. ಆರೋಪಿಗೆ ನನ್ನ ಮನೆಯಲ್ಲಿಯೇ ಹಣ ಕೊಟ್ಟಿದ್ದೇನೆ.

ನನಗೆ ವಾರ್ಷಿಕವಾಗಿ ಒಟ್ಟು ರೂ.7,50,000/- ಖರ್ಚಿದೆ. ಆರೋಪಿ ಕೊಟ್ಟಿದ್ದ ಚೆಕ್ ನ್ನು ದಿ.08.09.2023 ರಂದು ಬ್ಯಾಂಕಿಗೆ ಸಲ್ಲಿಸಿದ್ದೆ. ಆರೋಪಿ ಜೋಗಣ್ಣನಕೆರೆ ಶಾಖೆಯ ಕೆನರಾ ಬ್ಯಾಂಕಿನ ಚೆಕ್ ನ್ನು ನನಗೆ ಕೊಟ್ಟಿದ್ದರು. ಜೋಗಣ್ಣನಕೆರೆಯ ಜೇನುಬೈಲಿನ ಆರೋಪಿಯ ವಿಳಾಸಕ್ಕೆ ವಕೀಲರ ಮೂಲಕ ನೋಟೀಸು ಕಳುಹಿಸಿದ್ದೇನೆ. ಆ ನೋಟೀಸನ್ನು ಆರೋಪಿಯು ಸ್ವೀಕರಿಸಿಕೊಂಡಿಲ್ಲ. ಆರೋಪಿಗೆ ನಗದು ರೂಪದಲ್ಲಿ ಹಣ ಕೊಟ್ಟಿದ್ದೇನೆ ಎಂದು ದೂರು ಮತ್ತು ನೋಟೀಸಿನಲ್ಲಿ ನಮೂದಿಸಲಾಗಿದೆಯಾ ಎಂದು ಈಗ ನನಗೆ ನೆನಪಿಲ್ಲ. ರೂ.20,000/- ಕ್ಕಿಂತ ಅಧಿಕ ಮೊತ್ತವನ್ನು ಪಾವತಿಸಬೇಕಾದರೆ ಅದನ್ನು ಚೆಕ್ ಮೂಲಕ ಪಾವತಿಸಬೇಕು ಎನ್ನುವ ವಿಚಾರ ನನಗೆ ತಿಳಿದಿಲ್ಲ. ನನಗೆ ರೂ.9,00,000/- ಸಾಲವಾಗಿ ಕೊಡುವ ಆರ್ಥಿಕ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ. ನಿಪಿ-1 ರ ಚೆಕ್ ನ ದಿ.25.08.2023 ಆಗಿದೆ. ಆರೋಪಿಯೊಂದಿಗೆ ನಮ್ಮ ಮನೆಗೆ ಬಂದಿದ್ದ ವ್ಯಕ್ತಿಯು ನಿಪಿ-1 ರ ಚೆಕ್ ನ್ನು ಬರೆದಿದ್ದಾರೆ. ಆ ವ್ಯಕ್ತಿಯನ್ನು ಸಾಕ್ಷಿ ನುಡಿಸುವಿರ ಎಂದರೆ ಸಾಕ್ಷಿಯು ಅವರು ನನಗೆ ಪರಿಚಯ ಇಲ್ಲ ಎಂದು ನುಡಿಯುತ್ತಾರೆ.

ಚೆಕ್ ನಲ್ಲಿನ ಬರವಣಿಗೆ ಮತ್ತು ಸಹಿಯನ್ನು ಒಂದೇ ಪೆನ್ನಿನಲ್ಲಿ ಬರೆಯಲಾಗಿದೆ. ನಿಪಿ-1 ರಲ್ಲಿನ ಬರವಣಿಗೆ ಮತ್ತು ಸಹಿಯಲ್ಲಿನ ಶಾಹಿಯಲ್ಲಿ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ನಿಪಿ-1(ಎ) ಸಹಿ ತಿದ್ದುಪಡಿಯಾಗಿದೆ ಎಂದರೆ ಸರಿಯಲ್ಲ. ಚೆಕ್ ನಲ್ಲಿ ಬರವಣಿಗೆಯನ್ನು ನಾನೇ ಬರೆದಿದ್ದೇನೆ ಎಂದರೆ ಸರಿಯಲ್ಲ. ನನ್ನ ಆದಾಯಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ಆರೋಪಿ ನನ್ನಿಂದ ಎಂದಿಗೂ ರೂ.9,00,000/- ಹಣ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಈ ಕಾರಣ ಆರೋಪಿ ನನಗೆ ಯಾವುದೇ ಹಣ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಆರೋಪಿಯು ಚಂದ್ರೇಗೌಡರವರೊಂದಿಗೆ ಮಾಡುವ ಅಡಿಕೆ ವ್ಯವಹಾರದ ಬಾಬ್ತು ನಿಪಿ-1 ರ ಚೆಕ್ ನ್ನು ಭದ್ರತೆಗೆಂದು ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಹಾಗೇ ಕೊಟ್ಟಿದ್ದ ಚೆಕ್ ನ್ನು ದುರುಪಯೋಗಪಡಿಸಿಕೊಂಡು ಸದರಿ ಚಂದ್ರೇಗೌಡರವರು ನನ್ನ ಮೂಲಕ ಸುಳ್ಳು ಪ್ರಕರಣ ದಾಖಲು ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.